ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/18/ಸಿಸಿಟೆಕ್/2018-19 1178

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:10-07-2018

**-: ಸುತ್ತೋಲೆ :-**

ವಿಷಯ: ಶ್ರೀಮತಿ ಎಲ್. ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ ಇಲ್ಲಿ ಸಿಸಿಟೆಕ್ ವತಿಯಿಂದ ಆಯೋಜಿಸುತ್ತಿರುವ ಅಲ್ಪಾವಧಿ ತರಬೇತಿ ನಡೆಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/10/ಸಿಸಿಟೆಕ್/2017-18/952, ದಿನಾಂಕ: 14-07-2017.
2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/26/ಸಿಸಿಟೆಕ್/2017-18, ದಿನಾಂಕ: 05-09-2017.
3. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/01/ಸಿಡಿಸಿ(2)/2018-19/1132, ದಿನಾಂಕ: 06-07-2018.
4. ಪ್ರಾಚಾರ್ಯರು, ಶ್ರೀಮತಿ ಎಲ್. ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ ಇವರ ಪತ್ರ ಸಂಖ್ಯೆ:ಸಪಾಹಾ/ಸಿಸಿಟೆಕ್/2018-19/140, ದಿ:03-07-2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಎಲ್. ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ ಇಲ್ಲಿ ಸಿಸಿಟೆಕ್ ಉಪಘಟಕದ ಮೂಲಕ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ದಿನಾಂಕ:23-07-2018 ರಿಂದ 28-07-2018 (9.00AM ರಿಂದ 5.15PM) ರವರೆಗೆ "INTERNET OF THINGS" ಎಂಬ ವಿಷಯದ ಬಗ್ಗೆ ಒಂದು ವಾರದ ಅಲ್ಪಾವಧಿ ತರಬೇತಿ ನಡೆಸಲು ಅನುಮತಿ ಕೋರಿರುವ ಉಲ್ಲೇಖ (4)ರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಅಲ್ಪಾವಧಿ ತರಬೇತಿ ನಡೆಸಲು ಅನುಮತಿ ನೀಡಲಾಗಿದೆ ಹಾಗೂ ಸದರಿ ತರಬೇತಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ನೀಡಲಾಗುವ Course/Study Material (1Set) ಅನ್ನು ಜಂಟಿ ನಿರ್ದೇಶಕರು (ಸಿಡಿಸಿ) ವಿಭಾಗಕ್ಕೆ ಕಳುಹಿಸಲು ಸೂಚಿಸಲಾಗಿದೆ.

- ಉಲ್ಲೇಖ (1) ಮತ್ತು (3)ರ ಈ ಕಛೇರಿ ಸುತ್ತೋಲೆಯಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು.
- **ಉಲ್ಲೇಖ (2)ರಂತೆ ತರಬೇತಿ ನೀಡುವ ಸಂಸ್ಥೆಯ ಹೆಸರು ಮತ್ತು ಅಭ್ಯರ್ಥಿಗಳ ನೊಂದಣಿಯನ್ನು ಆಧಾರ್ ಕಾರ್ಡ್ ಸಂಖ್ಯೆಯ ಜೊತೆಯಲ್ಲಿ ಆನ್ ಲೈನ್ ಮೂಲಕ www.kaushalkar.com ನಲ್ಲಿ ಕಡ್ಡಾಯವಾಗಿ ನೊಂದಾಯಿಸುವುದು.**
- ಅಲ್ಪಾವಧಿ ತರಬೇತಿಗೆ ನೊಂದಾಯಿಸಿಕೊಳ್ಳಲು ಇಚ್ಛಿಸುವ ಉಪನ್ಯಾಸಕರು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರಿಂದ ಅನುಮತಿ ಪಡೆಯುವುದು ಖಡ್ಡಾಯವಾಗಿರುತ್ತದೆ.
- ತರಬೇತಿಗೆ ಸಂಬಂಧಿಸಿದ ವಿಷಯವನ್ನು ಬೋಧಿಸುವ ಉಪನ್ಯಾಸಕರನ್ನು ಆದ್ಯತೆಯ ಮೇರೆಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯಯರು ಒಂದು ವಿಭಾಗದಿಂದ ಒಬ್ಬರಂತೆ ಶಿಫಾರಸ್ಸು ಮಾಡುವುದು.
- ಪ್ರತಿ ಬ್ಯಾಚ್‌ಗೆ ಗರಿಷ್ಟ 30 ಅಭ್ಯರ್ಥಿಗಳಿಗೆ ಸೀಮಿತಗೊಳಿಸುವುದು.
- ತರಬೇತಿಗೆ ನೊಂದಾಯಿಸಿಕೊಂಡ ಅಭ್ಯರ್ಥಿಗಳ ಪಟ್ಟಿಗೆ ತರಬೇತಿ ಪ್ರಾರಂಭಿಸುವ ದಿನಾಂಕದ ಮೊದಲು ಕಡ್ಡಾಯವಾಗಿ ಇಲಾಖೆಯಿಂದ ಅನುಮತಿ ಪಡೆಯುವುದು.

--2

- ತರಬೇತಿಗೆ ನೊಂದಾಯಿಸಿಕೊಂಡು ಹಾಜರಾಗುವ ಉಪನ್ಯಾಸಕರಿಂದ ಸಂಸ್ಥೆಯ ದೈನಂದಿನ ಕೆಲಸಕಾರ್ಯಗಳಿಗೆ ತೊಂದರೆಯಾಗುವುದಿಲ್ಲವೆಂದು ಖಾತರಿ ಪಡಿಸಿಕೊಂಡು ಕಾರ್ಯವಿಮುಕ್ತಿಗೊಳಿಸುವುದು
- ತರಬೇತಿ ಅವಧಿಯಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾಗದಂತೆ ಎಚ್ಚರಿಕೆ ವಹಿಸಲು ಹಾಗೂ ಮುಂದೆ ತರಬೇತಿಯ ಸಾದಕ ಬಾದಕಗಳಿಗೆ ಪ್ರಾಂಶುಪಾಲರು ಹೊಣೆಗಾರರಾಗುತ್ತಾರೆ.
- ತರಬೇತಿ ನಡೆಯುವ ಸಮಯದಲ್ಲಿ ಉಪನ್ಯಾಸಕರಿಂದ ಪ್ರಾರಂಭದ ಸಮಯ 9.00AM ಮತ್ತು ಮುಕ್ತಾಯದ ಸಮಯ 5.15PM ಖಡ್ಡಾಯವಾಗಿ ಹಾಜರಾತಿಯಲ್ಲಿ ಎರಡು ಭಾರಿ ಸಹಿ ಪಡೆಯಲು ಸೂಚಿಸಿದೆ.
- ತರಬೇತಿ ನಡೆಯುವ ಸಮಯದಲ್ಲಿ ಇಲಾಖೆ ಅಧಿಕಾರಿಗಳು ಬೇಟಿ ನೀಡಿದಾಗ ತರಬೇತಿ ಅಭ್ಯರ್ಥಿಗಳ ಹಾಜರಾತಿ ಹಾಗೂ ತರಬೇತಿಯ ಪೂರ್ಣಪ್ರಮಾಣದ ವಿವರಗಳ ದಾಖಲೆಗಳನ್ನು ಸಲ್ಲಿಸುವುದು ಖಡ್ಡಾಯವಾಗಿರುತ್ತದೆ.

ಸದರಿ ತರಬೇತಿ ಕಾರ್ಯಕ್ರಮ ನಡೆಸಿದ ಒಂದು ತಿಂಗಳೊಳಗಾಗಿ ತರಬೇತಿಯ ಸಲುವಾಗಿ ಪಡೆದ ಶುಲ್ಕದ ಖರ್ಚು ವೆಚ್ಚಗಳ ಪಟ್ಟಿ, ಹಾಜರಾದ ಅಭ್ಯರ್ಥಿಗಳ ಪಟ್ಟಿಯೊಂದಿಗೆ ಸಮಗ್ರ ವರದಿಯನ್ನು ಹಾಗೂ ಲಾಭಾಂಶದ ಶೇ.25ರ ಮೊತ್ತವನ್ನು ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ /ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ, ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ: ಪ್ರಾಚಾರ್ಯರು, ಶ್ರೀಮತಿ ಎಲ್ ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ,

1. ಸಹಾಯಕ ನಿರ್ದೇಶಕರು/ಅಭಿವೃದ್ಧಿ ಅಧಿಕಾರಿಗಳು (ಸಿಸಿಟೆಕ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಸದರಿ ತರಬೇತಿ ನಡೆಯುವ ಸಮಯದಲ್ಲಿ ಒಂದು ಅಥವಾ ಎರಡು ಭಾರಿ ಸಂಸ್ಥೆಗೆ ಬೇಟಿ ನೀಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.